RNU AIR DHARWAD

APRIL 02, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಇಂದು ಶ್ರೀ ಹನುಮ ಜಯಂತ್ಯುತ್ಸವ.** ಮಾರ್ಗಶಿರ ಮಾಸ, ಶುಕ್ಲಪಕ್ಷದ ತ್ರಯೋದಶಿಯಂದು, ಶ್ರದ್ಧಾ–ಭಕ್ತಿಗಳಿಂದ ನಾಡಿನ ದೇಗುಲಗಳಲ್ಲಿ, ತೊಟ್ಟಿಲೋತ್ಸವ ಆಚರಿಸಲಾಗುತ್ತಿದೆ. “ಬಜರಂಗಬಲಿ, ನಾಡಿನ ಯುವಶಕ್ತಿಗೆ ಶಕ್ತಿ, ಭಕ್ತಿ, ವಿನಯ ಮತ್ತು ನಿಸ್ವಾರ್ಥ ಸೇವೆಯ ಮನೋಬಲ ತುಂಬಿ, ಆಯೋರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲಿ” ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಶುಭ ಹಾರೈಸಿದ್ದಾರೆ.

<><><>

**ಶಿವ ಶರಣೆ ಶ್ರೀ** ಅಕ್ಕಮಹಾದೇವಿಯವರ ಜಯಂತಿ ಇಂದು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ.ಪಾಟೀಲ ಶುಭಾಶಯ ಕೋರಿ, ‘ಚೆನ್ನಮಲ್ಲಿಕಾರ್ಜುನ’ ಅಂಕಿತನಾಮದೊಂದಿಗೆ, ಅವರ ವಚನಗಳು, ಸ್ತ್ರೀ ಸಮಾನತೆ ಮತ್ತು ಅಧ್ಯಾತ್ಮದ ಉತ್ತುಂಗವನ್ನು ಜಗತ್ತಿಗೆ ಸಾರುತ್ತಿವೆ, ಎಂದಿದ್ದಾರೆ.

<><><>

**ನಾಡಿನ ಭಾವೈಕ್ಯತೆ,** ಭಕ್ತಿ ಮತ್ತು ಪರಂಪರೆಯ ಪ್ರತೀಕವಾದ, ಬೆಂಗಳೂರು ಕರಗ, ಶಕ್ತಿ ಉತ್ಸವದ ಅಂಗವಾಗಿ, ತಿಗಳರಪೇಟೆಯ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ಆದಿಶಕ್ತಿ ದ್ರೌಪದಮ್ಮನ ದರ್ಶನ ಪಡೆದು, ವಿಶೇ ’ ಪೂಜೆ ಸಲ್ಲಿಸಿದ್ದಾಗಿ, ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

<><><>

**ಇಂದು ಪೊಲೀಸ್ ಧ್ವಜ ದಿನಾಚರಣೆ.** ಬಳ್ಳಾರಿ ಜಿಲ್ಲೆ, ಸಶಸ್ತ್ರ ಮೀಸಲು ಪೊಲೀಸ್ ಪಡೆ ಮೈದಾನದಲ್ಲಿ, ಇಂದು ಬೆಳಗ್ಗೆ ಪೊಲೀಸ್ ಧ್ವಜ ದಿನಾಚರಣೆ ನಡೆಯಿತು. ಬಳ್ಳಾರಿ ಗ್ರಾಮೀಣ ಠಾಣೆಯ, ನಿವೃತ್ತ ಎ.ಎಸ್.ಐ. ಎಂ. ಶ್ರೀನಿವಾಸುಲು, ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಗೌರವ ವಂದನೆ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು,

<><><>

**ರಾಜ್ಯದ ವಿವಿಧ ಇಲಾಖೆಗಳಲ್ಲಿ** ಕಾರ್ಯನಿರ್ವಹಿಸುತ್ತಿರುವ, 3 ಲಕ್ಷ ದಿನಗೂಲಿ ನೌಕರರು ಮತ್ತು ಅವರ ಅವಲಂಬಿತರಿಗೆ, ವಾರ್ಷಿಕ 5 ಲಕ್ಷ ರೂಪಾಯಿ ವರೆಗೆ, ನಗದು ರಹಿತ, ಚಿಕಿತ್ಸೆ ಪಡೆಯಬಹುದಾದ, ಆರೋಗ್ಯ ಯೋಜನೆಯನ್ನು ವಿಸ್ತರಿಸಿ, ಆರೋಗ್ಯ ಇಲಾಖೆ ಆದೇಶಿಸಿದೆ. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು, ಅವಕಾಶ ಕಲ್ಪಿಸಲಾಗಿದೆ.

<><><>

**ಕೃತಕ ಬುದ್ಧಿಮತ್ತೆ – ಎ.ಐ. ತಂತ್ರಜ್ಞಾನದಿಂದ,** ವಿವಿಧ ಕ್ಷೇತ್ರಗಳಲ್ಲಿ ಸೃಷ್ಟಿಯಾಗುವ ಅವಕಾಶ, ಸವಾಲು ಮತ್ತು ಬಳಕೆ ಕುರಿತು, ರಾಜ್ಯ ಮಾಹಿತಿ ತಂತ್ರಜ್ಞಾನ ಇಲಾಖೆ, ಸಮೀಕ್ಷೆ ಕೈಗೊಂಡು, ಮಹತ್ವದ ಮಾಹಿತಿ ಕಲೆಹಾಕಿದೆ. ಐ.ಟಿ. ವಿಜನ್ ಗ್ರುಪ್ ಸದಸ್ಯರು, ಸಿ.ಇ.ಓ, ಸಿ.ಐ.ಓ, ಮತ್ತು ಸಿ.ಟಿ.ಓ.ಗಳೊಂದಿಗೆ, ಇಲಾಖೆ ನಿರಂತರ ಸಮಾಲೋಚನೆ ನಡೆಸುತ್ತಿದ್ದು, ಔದ್ಯೋಗಿಕ ಕ್ಷೇತ್ರ ಮತ್ತು ಡೇಟಾ ಸಿದ್ಧತೆಯಲ್ಲಿರುವ ಕೊರತೆಗಳನ್ನು, ಅರ್ಥಮಾಡಿಕೊಳ್ಳಲು, ಯೋಜಿಸಲಾಗಿದೆ.

<><><>

**ವಾಣಿಜ್ಯ ಬಳಕೆಯ, 19 ಕಿಲೋ ಎಲ್.ಪಿ.ಜಿ. ಸಿಲಿಂಡರ್** ದರ, ನಿನ್ನೆ, ಏಪ್ರಿಲ್ 1 ರಿಂದ, ಅನ್ವಯವಾಗುವಂತೆ, 195 ರೂಪಾಯಿ 50 ಪೈಸೆಯಷ್ಟು ಹೆಚ್ಚಿಸಲಾಗಿದೆ. 14 ದಶಾಂಶ 2 ಕಿಲೋ ತೂಕದ, ಗೃಹ ಬಳಕೆ, ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು, ಕಳೆದ ಮಾರ್ಚ್ 7 ರಂದು, 60 ರೂಪಾಯಿ ಏರಿಸಲಾಗಿದೆ.

<><><>

**ಹಿಂದಿ ಸೇರಿ, ತೃತೀಯ ಭಾಷೆಗಳಾಗಿ,** ಅಧ್ಯಯನ ಮಾಡುವ ವಿಷಯಗಳಿಗೆ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ, ಅಂಕಗಳ ಬದಲು, ಗ್ರೇಡ್ ನೀಡುವುದಕ್ಕೆ ಮುಂದಾಗಿರುವ, ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

<><><>

**ಒಂದನೇ ತರಗತಿಯಿಂದ, 9ರ ವರೆಗಿನ** ವಾರ್ಷಿಕ ಪರೀಕ್ಷೆಗಳು, ಈ ತಿಂಗಳ 10ನೇ ತಾರೀಖಿನ ವರೆಗೆ ನಡೆಯಲಿವೆ. ಈ ಹಿನ್ನೆಲೆ, ವಿದ್ಯಾರ್ಥಿಗಳ ಕೆ.ಎಸ್.ಆರ್.ಟಿ.ಸಿ. ಬಸ್ ಪಾಸ್‌ನ್ನು, 10ನೇ ತಾರೀಖಿನ ವರೆಗೆ ವಿಸ್ತರಿಸಲಾಗಿದೆ ಎಂದು, ಚಾಲಕ ಮತ್ತು ನಿರ್ವಾಹಕರಿಗೆ ಸೂಚಿಸುವಂತೆ, ಎಲ್ಲ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ, ರಾಜ್ಯ ಮುಖ್ಯ ಸಂಚಾರ ವ್ಯವಸ್ಥಾಪಕರು, ನಿರ್ದೇಶಿಸಿದ್ದಾರೆ.

<><><>

**ನೈರುತ್ಯ ರೇಲ್ವೆ ಹುಬ್ಬಳ್ಳಿ ವಿಭಾಗ,** 2025–26ನೇ ಆರ್ಥಿಕ ವರ್ಷಕ್ಕೆ, ಅತ್ಯುತ್ತಮ ಸಾಧನೆ ಗೈಯ್ದಿದೆ. 39 ದಶಾಂಶ 5 ಮಿಲಿಯನ್ ಟನ್ ಸರಕು ಸಾಗಣೆ ಮೂಲಕ, ಹುಬ್ಬಳ್ಳಿ ರೇಲ್ವೆ ವಿಭಾಗ, ಗಮನ ಸೆಳೆದಿದೆ. 99 ರೈಲುಗಳ ವೇಗ ಹೆಚ್ಚಿಸಿ, ಪ್ರಯಾಣಿಕರ ಆದಾಯದಲ್ಲಿ, ಶೇಕಡ 70 ರಷ್ಟು, ಕೊಡುಗೆ ನೀಡಿದೆ. ಒಟ್ಟು 53 ರೂಟ್ ಕಿಲೋ ಮೀಟರ್ ವಿದ್ಯುದ್ದೀಕರಣ ಕಾಮಗಾರಿ, ಪೂರ್ಣಗೊಂಡಿದೆ. 78 ದಶಾಂಶ 1 ಕಿಲೋ ಮೀಟರ್‌ಗಳಷ್ಟು, ಜೋಡಿ ರೈಲು ಮಾರ್ಗ ಹಾಗೂ 24 ಕಿಲೋ ಮೀಟರ್, ಹೊಸ ರೈಲು ಮಾರ್ಗದ ಕಾಮಗಾರಿಗಳು, ಪೂರ್ಣಗೊಂಡಿವೆ.

<><><>

**ಛತ್ತೀಸ್‌ಘಡದ ಅಂಬಿಕಾಪುರದಲ್ಲಿ** ನಡೆಯುತ್ತಿರುವ, ಖೇಲೋ ಇಂಡಿಯಾ ಬುಡಕಟ್ಟು ಪಂದ್ಯಾವಳಿಯ, ಕುಸ್ತಿ ವಿಭಾಗದಲ್ಲಿ, ಕರ್ನಾಟಕದ ಕುಸ್ತಿಪಟುಗಳು, 3 ಚಿನ್ನ, 1 ಬೆಳ್ಳಿ ಹಾಗೂ 3 ಕಂಚಿನ ಪದಕ ಜಯಿಸಿದ್ದಾರೆ. ರೋಹನ ದೊಡ್ಡಮನಿ, ಪ್ರಿನ್ಸಿಟಾ ಫರ್ನಾಂಡಿಸ್ ಸಿದ್ದಿ, ಮನಿಷಾ ಸಿದ್ದಿ, ಶಾಲಿನಾ ಸಿದ್ದಿ, ಅಮೂಲ್ಯಾ ಕುಂದರಗಿ, ಕೆಂಪನಗೌಡ ಕೆಂಪನವರ ಹಾಗೂ ಅಮೃತ ದುರ್ಗನ್ನವರ, ಪದಕ ಪಟ್ಟಿಯಲ್ಲಿದ್ದಾರೆ.

<><><>

**ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ**, ಕರ್ನಾಟಕವನ್ನು ಪ್ರತಿನಿಧಿಸಿದ, ರಾಜ್ಯದ ವಿಶ್ರಾಂತ, 55 ವರ್ಷ ಮೇಲ್ಪಟ್ಟ, ಕ್ರಿಕೆಟ್ ಆಟಗಾರ್ತಿಯರಿಗೆ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ, ಮಾಸಿಕ ಪಿಂಚಣಿ ನೀಡಲಿದೆ ಎಂದು, ಕೆ.ಎಸ್.ಸಿ.ಎ. ಕಾರ್ಯದರ್ಶಿ ಸಂತೋಷ ಮೆನನ್ ತಿಳಿಸಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**